# ಕುದುರೆಯ ಈಜು

■ ಮಲ್ಲಿಕಾರ್ಜುನ ಸುರಧೇನುಪುರ
ಕಲೆ: ಸಂತೋಷ್ ಸಸಿಹಿತ್ಲು

ಪುರಾಣ ಕಥೆಗಳಲ್ಲಿ ಮತ್ತು ಐತಿಹಾಸಿಕ ಕಥೆಗಳಲ್ಲಿ ರಾಜ ಮಹಾರಾಜರು ಮಾರುವೇಷದಲ್ಲಿ ತೆರಳಿ ಜನರ ಸ್ಥಿತಿಗತಿಗಳನ್ನು ತಿಳಿದುಕೊಳ್ಳುತ್ತಿದ್ದರು. ಅಂತೆಯೇ ಸಿರಿವೆನ್ನೆಲಾ ಸಾಮ್ರಾಜ್ಯದ ಯುವರಾಜ ದೇವದತ್ತ ತಾನು ಮಾರುವೇಷದಲ್ಲಿ ರಾಜ್ಯ ಸಂಚಾರ ಮಾಡಿ ಬರುವುದಾಗಿ ತನ್ನ ತಂದೆಗೆ ತಿಳಿಸಿದ. ಏಕೈಕ ಪುತ್ರನ ಆಸೆಗೆ ತಣ್ಣೀರು ಎರಚುವುದು ಬೇಡವೆಂದು ಮಹಾರಾಜ ದೇವರಾಯ ಅಸ್ತು ಎಂದನು. ಬಿಳಿ ಕುದುರೆಯ ಮೇಲೆ ದೇವದತ್ತ ಸಂಚಾರ ಹೊರಟನು. ಮಾರುವೇಷದ ಸವಾರಿಗೆ ಯಾವುದೇ ಬೀಳ್ಕೊಡುಗೆಯ ಉಪಚಾರ ಇರಲಿಲ್ಲ. ಮಧ್ಯಾಹ್ನದ ವೇಳೆಗೆ ಒಂದು ಗ್ರಾಮ ತಲುಪಿದ. ಖಾನಾವಳಿಯಲ್ಲಿ ಊಟ ಮಾಡಿದ, ಅದರ ಹಣ ಪಾವತಿಸಿದ. ಖಾನಾವಳಿಯಲ್ಲಿ ಇದ್ದ ಜನರೊಡನೆ ರಾಜ್ಯದ ಆಗುಹೋಗುಗಳನ್ನು ವಿಚಾರಿಸಿದ. ಕೆಲವರು ಸೌಜನ್ಯದಿಂದ ಉತ್ತರಿಸಿದರು. ಇನ್ನು ಕೆಲವರು ಊರಿನ ಉಸಾಬರಿ ನಿನಗ್ಯಾಕೆ ಎಂದು ಖಾರವಾಗಿ ಪ್ರತಿಕ್ರಿಯೆಯ ಮಾತುಗಳನ್ನು ಆಡಿದರು.

ಊರ ಹೊರಗೆ ಬಂದು ಕಟ್ಟಿ ಹಾಕಿದ್ದ ಕುದುರೆಯನ್ನು ಬಿಚ್ಚಿ, ಸವಾರಿ ಮುಂದುವರೆಸಿದ. ಆಕಾಶದಲ್ಲಿ ದಟ್ಟನೆಯ ಮೋಡ ಕವಿಯಿತು. ಗುಡುಗು, ಸಿಡಿಲು ಮಿಂಚು ಒಂದನ್ನೊಂದು ಮೀರಿಸುವಂತೆ ಆರ್ಭಟಿಸತೊಡಗಿದವು. ದೇವದತ್ತನಿಗೆ ಹೊಳೆಯೊಂದು ಎದುರಾಯಿತು. ಸಣ್ಣಗೆ ತಣ್ಣಗೆ ಹರಿಯುತ್ತಿದ್ದ ಹೊಳೆ ದೂರದಲ್ಲೆಲ್ಲೋ ಸುರಿಯುತ್ತಿದ್ದ ಭಾರಿ ಮಳೆಗೆ ತನ್ನ ಪಾತ್ರವನ್ನು ವಿಸ್ತರಿಸಿಕೊಂಡು ಪ್ರವಾಹದ ರೀತಿಯಲ್ಲಿ ಹರಿಯತೊಡಗಿತು. ತಾನಿದ್ದ ಪ್ರದೇಶದಲ್ಲಿಯೂ ಮಳೆಯ ಭೋರ್ಗರೆತ ಆರಂಭವಾಯಿತು. ಸ್ವಲ್ಪ ಸಮಯದಲ್ಲೇ ನೀರು ಕುದುರೆಯ ಕಣ್ಣುಗಳ ಮಟ್ಟ ತಲುಪಿತು. ಕುದುರೆಯು ತನ್ನ ಜೀವ ಉಳಿಸಿಕೊಳ್ಳಲು ಮೈಮೇಲೆ ಇದ್ದ ದೇವದತ್ತನನ್ನು ಕೊಡವಿ ಈಜಿ ಅತ್ತ ಕಡೆಯ ದಡ ಸೇರಿತು. ದೇವದತ್ತ ತನ್ನ ಜೀವ ಉಳಿಸಿಕೊಳ್ಳಲು ತನಗೆ ಆಸರೆಯಾಗಿ ಸಿಕ್ಕ ಮರವನ್ನು ಗಟ್ಟಿಯಾಗಿ ಹಿಡಿದುಕೊಂಡನು. ತನಗೂ ಈಜಲು ಬರುತ್ತಿದ್ದರೆ ತಾನು ಈಜಿ ದಡ ಸೇರಬಹುದಿತ್ತು ಎಂದು ಆಲೋಚಿಸುತ್ತಾ ಇದ್ದವನಿಗೆ ಹಿಂದಿನ ಸಂಗತಿ ನೆನಪಾಯಿತು. ಗುರುಗಳಾದ ಆಚಾರ್ಯ ರಾಕುಂ ಅವರು ಈಜು ಕಲಿಯುವಂತೆ ಹೇಳಿದ್ದರು. ಅದಕ್ಕೆ ಕಿವಿಗೊಡದೆ ಕುರಿ–ಮೇಕೆ, ದನ–ಕರು, ನಾಯಿ, ನರಿ, ಕುದುರೆಗಳೆಲ್ಲ ಈಜಾಡುತ್ತವೆ ಅದರಲ್ಲೇನು ವಿಶೇಷ ಎಂದು ಹೀಯಾಳಿಸಿದ್ದ.

ಯುವರಾಜ ಇಂಥದ್ದೊಂದು ಎಡವಟ್ಟು ಮಾಡಿಕೊಳ್ಳಬಹುದೆಂಬ ಅರಿವಿದ್ದ ದೇವರಾಯ, ರಥದಲ್ಲಿ ನಾಲ್ಕು ಸೈನಿಕರೊಡನೆ ಹಿಂಬಾಲಿಸಿ ಬಂದಿದ್ದ. ರಥದ ಜೋಡಿ ಕುದುರೆಗಳಿಗೆ ಕಟ್ಟಿದ್ದ ಹಗ್ಗಗಳನ್ನು ಬಿಚ್ಚಿದ. ಮತ್ತೆ ಅವುಗಳನ್ನು ಗಂಟು ಹಾಕಿದ. ಸುರಿವ ಮಳೆಯನ್ನು ಲೆಕ್ಕಿಸದೆ ಮಗನಿಗೆ ಕೂಗಿ ಹೇಳಿದ 'ಹಗ್ಗವನ್ನು ಎಸೆಯುತ್ತೇನೆ ಗಟ್ಟಿಯಾಗಿ ಹಿಡಿದುಕೊ' ದೇವರಾಯ ಹಗ್ಗವನ್ನು ಎಸೆದನು. ದೇವದತ್ತ ಹಗ್ಗವನ್ನು ಹಿಡಿದುಕೊಂಡನು. ಸೈನಿಕರು ದೇವದತ್ತನನ್ನು ಎಳೆದುಕೊಂಡರು. ದೇವರಾಯ, ದೇವದತ್ತ ಮತ್ತು ನಾಲ್ವರು ಸೈನಿಕರು ಸುರಿವ ಮಳೆಯಲ್ಲೆ ರಥಾರೂಢರಾಗಿ ಅರಮನೆ ಸೇರಿಕೊಂಡರು. ಈಜಿ ಆ ಕಡೆಯ ದಡ ಸೇರಿದ್ದ ಕುದುರೆ, ಇವರಿಗೂ ಮುನ್ನವೆ ತನ್ನ ಲಾಯವನ್ನು ಸೇರಿಕೊಂಡಿತ್ತು. ಕುದುರೆಯ ಈಜಿನಿಂದ ಪ್ರೇರಿತನಾದ ದೇವದತ್ತ ಅರಮನೆಯ ಆವರಣದ ಕೊಳದಲ್ಲಿ ಈಜು ಕಲಿತನು. ■

